# ಆಹಾ ಸುದ್ದಿ!

★ ಸಸಿತೋಟ



ಈತ ಶಕ ಝುಲು. ಐವರಿ ಕೋಸ್ಟ್‌ನ 'ಬಲ ಭೀಮ'. 410 ಕೆಜಿ ತೂಕದ ಟೈರ್ ಅನ್ನು ಎತ್ತಿ ಉರುಳಿಸಿದ. 5.5 ಟನ್ ತೂಕದ ಟ್ರಕ್ ಅನ್ನು 12 ಮೀಟರ್ ದೂರದವರೆಗೆ ಎಳೆದ. ದಾಖಲೆಯನ್ನೇನೋ ಮಾಡಿದ. ಆದರೆ ನಿರುದ್ಯೋಗಿಯಂತೆ. ಈತನನ್ನು ಬೆಂಗಳೂರು ನಗರ ಸಂಚಾರಿ ಪೊಲೀಸ್ ಇಲಾಖೆ ನೇಮಿಸಿಕೊಳ್ಳಬಹುದಿತ್ತು. ಅಡ್ಡ ನಿಂತ ವಾಹನಗಳ ಟೈರ್ ಕಳಚಿ ಓಡಿಸುವ ಮೂಲಕ ಟ್ರಾಫಿಕ್ ಜಾಮ್ ತೆರವು ಮಾಡುತ್ತಿದ್ದನೇನೊ!

ಡಿಗ್ರಿ ಮಾಡಿ ಉದ್ಯೋಗಕ್ಕೆ ಸೇರುವುದು ಸಾಮಾನ್ಯ. ಟೆಕ್ಸಾಸ್‌ನ ದಂಪತಿ ಹೆರಾಲ್ಡ್ ಮತ್ತು ಫ್ರಾನ್ಸಿಸ್ ಉದ್ಯೋಗದಿಂದ ನಿವೃತ್ತಿಯಾದ ನಂತರ ಡಿಗ್ರಿ ತರಗತಿಗೆ ಸೇರಿದ್ದಾರೆ. 51 ವರ್ಷಗಳ ಹಿಂದೆ ಮದುವೆಯಾದ ಈ ಜೋಡಿ ಆಗ ಹೈಸ್ಕೂಲ್‌ನಲ್ಲಿ ಓದುತ್ತಿದ್ದರಂತೆ. ಬದುಕಿನ ಚಕ್ರ ಹೇಗೆ ಬೇಕಾದರೂ ತಿರುಗಬಹುದು ಅಲ್ಲವೇ?



ಸ್ಯಾನ್ ಫ್ರಾನ್ಸಿಸ್ಕೋದ ಈ ನಾಯಿ ಜಾಕ್ ತಲೆಯ ಮೇಲೆ ಏನಿಟ್ಟರೂ ಸಮತೋಲನ ಸಾಧಿಸುತ್ತದೆ. ಪುಸ್ತಕ, ಬಿಸ್ಕತ್, ಮೊಟ್ಟೆ, ಹಣ್ಣು, ನಾಣ್ಯಗಳು, ನೀರಿನ ಲೋಟ ಮೊದಲಾದ ಹಗುರ ವಸ್ತುಗಳನ್ನು ತಲೆಯ ಮೇಲಿಟ್ಟರೆ ಅಲ್ಲಾಡದೆ ಸಮತೋಲನ ಮಾಡುತ್ತದಂತೆ. ತಲೆಯ ಮೇಲಿಟ್ಟು ಉಳಿದ ಬಿಸ್ಕತ್, ಮೊಟ್ಟೆಗಳನ್ನು ಜಾಕ್ ಎದುರು ಇಟ್ಟು ಆಗ ನೋಡಬೇಕಿತ್ತು, ಸಮತೋಲನದ ಆಟವನ್ನು.



ಅಮೆರಿಕಾದ ಸಿಯಾಟಲ್‌ನಲ್ಲಿರುವ 200 ಚ.ಅಡಿಗಳ ಮೈಕ್ರೊ ಅಪಾರ್ಟ್‌ಮೆಂಟ್. ಅಷ್ಟೇ ಜಾಗದಲ್ಲಿ ಹಾಸಿಗೆ, ಅಡುಗೆ ಕಟ್ಟೆ, ಕೈ ತೊಳೆಯುವ ಜಾಗ ಎಲ್ಲವೂ. ಸರ್ಕಾರವೇ ಇಂತಹ ಅಪಾರ್ಟ್‌ಮೆಂಟ್ ನಿರ್ಮಾಣಕ್ಕೆ ಒತ್ತು ನೀಡುತ್ತಿದೆಯಂತೆ. ಇನ್ನು ಮುಂದೆ ಒಂದೇ ಕೊಠಡಿಯಲ್ಲಿ ಸಂಸಾರ ಮಾಡುವ ಭಾರತೀಯರು ಬಡವರು ಎನ್ನುವ ಹಾಗಿಲ್ಲ.

ಅಮೆರಿಕಾದ ಕನೆಕ್ಟಿಕಟ್‌ನ ಮನೆಯೊಂದರಲ್ಲಿ ಅಲ್ಲಿಯ ಪರಿಸರ ರಕ್ಷಣಾ ಇಲಾಖೆಯವರು 300 ಗ್ಯಾಲನ್ ಮೂತ್ರವನ್ನು ಪತ್ತೆ ಮಾಡಿದ್ದಾರಂತೆ. ತಲಾ ಒಂದು ಗ್ಯಾಲನ್ ಹೂಜಿಯಲ್ಲಿ ಇದ್ದ ಮಾನವ ಮೂತ್ರವನ್ನು ಸಂಗ್ರಹಿಸಿದಾತ ಅದೇನು ಮಾಡುತ್ತಿದ್ದ ಎಂಬುದು ಇನ್ನೂ ಗೊತ್ತಾಗಿಲ್ಲ. ಸ್ವಮೂತ್ರ ಪಾನ ಅಭ್ಯಾಸವಿತ್ತು ಎನ್ನುವ ಹಾಗೂ ಇಲ್ಲ. ಏಕೆಂದರೆ ಆ ಅಭ್ಯಾಸ ಇದ್ದಿದ್ದರೆ ಮೂತ್ರ ಹೂಜಿಯ ಬದಲು ಇನ್ನೆಲ್ಲೋ ಇರುತ್ತಿತ್ತು.

ಜಪಾನ್‌ನಲ್ಲಿ 'ಮಕ್ಕಳನ್ನು ಅಳಿಸುವ ಸುಮೊ ಸ್ಪರ್ಧೆ' ಎಲ್ಲರ ಆಕರ್ಷಣೆ. ಅಳುವ ಮಕ್ಕಳನ್ನು ಸುಮ್ಮನಿರಿಸುವ ಬದಲು ಈ ಸುಮೊ ಪಟುಗಳು ಮಕ್ಕಳನ್ನು ಜೋರಾಗಿ ಅಳಿಸುತ್ತಾರಂತೆ. ಮಕ್ಕಳು ಜೋರಾಗಿ ಅತ್ತಷ್ಟೂ ಮುಂದೆ ಉತ್ತಮ ಆರೋಗ್ಯದೊಂದಿಗೆ ಬೆಳೆಯುತ್ತಾರೆಂಬ ನಂಬಿಕೆ. ಅಳುಮುಂಜಿ ಮಕ್ಕಳನ್ನು ಸುಮ್ಮನಿರಿಸಲು ಹರಸಾಹಸ ಪಡುವ ನಮ್ಮಲ್ಲಿಯ ತಾಯಂದಿರಿಗೆ ಇದು ಖುಷಿಯ ಸುದ್ದಿ ಇರಬಹುದು.

